ಸಲೀಮ್. ಇದ್ದಕ್ಕಿದ್ದಂತೆ ಗಂಟಲು ಸರಿಪಡಿಸಿಕೊಂಡು, "ಕೆಲಸ ಹೋಯ್ತು" ಎಂದ ದುಗುಡದಿಂದ. ಅದೇನೂ ಗಂಭೀರ ವಿಷಯ ಅಲ್ಲ ಎನ್ನುವಂತೆ ಅವನ ಕೈಯನ್ನು ಮೃದುವಾಗಿ ಅಮುಕಿದಳು. ಅದ್ಭುತವಾದ ಭರವಸೆಯನ್ನು ತುಂಬುವವಳಂತೆ ಅನುಕಂಪದ ನೋಟವನ್ನು ಅವನೆಡೆ ಬೀರತೊಡಗಿದಳು. ತುಂಬಾ ಹೊತ್ತು ಮೌನ. ಮಳೆ ಹನಿಗಳು ನಿಧಾನವಾಗಿ ಉದುರುತ್ತಿದ್ದವು. ಪ್ರೊಫೆಸರ್ ಮಳೆ ಎದುರು ನಿಂತು ಪೊಯೆಟ್ರಿಯನ್ನು ರಿಸೈಟ್ ಮಾಡುತ್ತಿದ್ದರು; ದೂರದಲ್ಲಿ ಎಲ್ಲಿಂದಲೋ ನಗುವ ಸದ್ದು, ಜಿಂಕೆಗಳು ಓಡಿದಂತೆ. ಮನೋರಮ ಟೀ ಕುಡಿಯುವುದನ್ನು ನಿಲ್ಲಿಸಿ, ಚಿಕ್ಕದಾಗಿ ಶಿಳ್ಳೆ ಹಾಕತೊಡಗಿದಳು. ಸಲೀಮ್ ಮನೋರಮಳೊಂದಿಗಿನ ಪರಿಚಯವನ್ನು ನೆನಪಿಸಿಕೊಳ್ಳತೊಡಗಿದ.

ಆಕೆ ಮೊದಲ ಸಲ ಒಂದು ಸಾಹಿತ್ಯ ಸಭೆಯಲ್ಲಿ ಭೇಟಿಯಾಗಿದ್ದಳು. ಸಂಸ್ಕೃತಿ ಕುರಿತು, ಡಯೆಲೆಕ್ಟ್ ಕುರಿತು, ಅರ್ಥವಾಗದ ಸಾಕಷ್ಟು ವಿಷಯಗಳ ಕುರಿತು ಮಾತನಾಡುತ್ತಲೇ ಇದ್ದಳು. ಒಂದು ವಾರ ಕಳೆಯುವಷ್ಟರಲ್ಲಿ ಮನೋರಮಳಿಂದ ಪತ್ರ ಬಂತು. ಸಲೀಮ್ ಕವಿತೆಯನ್ನು ಮೆಚ್ಚಿಕೊಳ್ಳುತ್ತಾ. ಆ ಪತ್ರಕ್ಕೆ ಅವಸರದಿಂದ ಉತ್ತರ ಬರೆದ ನೆನಪು. ಹತ್ತೋ ಇಪ್ಪತ್ತೋ ಪತ್ರಗಳು ಸಾಲಾಗಿ, ಅವುಗಳ ಮೇಲೆ ನಂಬರುಗಳನ್ನು ಹಾಕಿಕೊಂಡು ಗುರುತಿಟ್ಟುಕೊಳ್ಳುತ್ತಿದ್ದ. ಪತ್ರಗಳಲ್ಲಿನ ಪರಿಮಳಭರಿತ ಗೆಳೆತನ ಅವರಿಬ್ಬರನ್ನು ಹತ್ತಿರ ಸೇರಿಸಿತ್ತು.

★★★

ಮಳೆ ನಿಲ್ಲುವ ಸೂಚನೆಗಳು ಕಾಣುತ್ತಿರಲಿಲ್ಲ. ವೃದ್ಧಪ್ರೊಫೆಸರ್‌ನ ಪೊಯೆಟ್ರಿ ರಿಸೈಟೇಶನ್ ನಿಂತು ಹೋಯಿತು. ಕ್ಯಾಂಟೀನ್ ಹೊರಗೆ ಗಲಾಟೆ. ಇಬ್ಬರು ಪೊಲೀಸರು ಬೂಟುಗಳನ್ನು ಸದ್ದು ಮಾಡುತ್ತಾ ಒಳಗೆ ಬಂದರು. ಒಳಗಿದ್ದ ಮನುಷ್ಯರ ಕಡೆ ದಿಟ್ಟಿಸಿ ನೋಡಿದರು. ಕ್ಯಾಂಟೀನಿನ ಮಾಲೀಕ ಎರಡು ಕಪ್‌ಗಳಲ್ಲಿ ಅವರಿಗೆ ಟೀ ಕೊಟ್ಟ. ಪೊಲೀಸರ ಆಗಮನದಿಂದ ಅಲ್ಲಿನ ವಾತಾವರಣ ಬಿಸಿಯಾಯಿತು. "ವಿದ್ಯಾರ್ಥಿ ಸಂಘಟನೆಯ ನಾಯಕನನ್ನು ಬೆಳಗಿನ ಜಾವ ಎಂಜಿನಿಯರಿಂಗ್ ಕಾಲೇಜಿನ ಗೇಟಿನ ಬಳಿ ಇರಿದು ಕೊಂದಿದ್ದಾರೆ. ಬೆಳಗ್ಗೆಯಿಂದ ಹಾಸ್ಟೆಲ್, ಕ್ಲಾಸ್‌ರೂಂಗಳನ್ನು ಪೊಲೀಸರು ಕೂಂಬಿಂಗ್ ಮಾಡುತ್ತಿದ್ದಾರೆ." ಮನೋರಮಳ ಮುಖದಲ್ಲಿನ ಶಾಂತಿ ಮಾಯವಾಗಿ, ಬೇಸರ, ಅಸಹನೆ ತುಂಬಿತು. ಕೈಯಲ್ಲಿನ ಟೀ ಕಪ್ ಏಕೋ ನಡುಗಿತು.

ವೃದ್ಧಪ್ರೊಫೆಸರ್ ಮೌನವಾಗಿ ಒಂದು ಮೂಲೆಗೆ ಹೋಗಿ ಕುಳಿತುಕೊಂಡ. ಕ್ಯಾಂಟೀನ್ ನಿಶ್ಶಬ್ದವಾಗಿತ್ತು. ಮಳೆ ಸದ್ದು ಲಯಬದ್ಧವಾಗಿ, ನಿರಂತರವಾಗಿ ಮುಂದುವರೆದಿತ್ತು. ಮಳೆ ಹನಿಗಳ ಸದ್ದನ್ನು ಕೇಳುತ್ತಾ ಅವರಿಬ್ಬರು ಮೌನವಾಗಿದ್ದರು.

ಒಂದು ಸಾಯಂಕಾಲ, ಕತ್ತಲೆಯನ್ನು ಅವಕಾಶ ಮಾಡಿಕೊಂಡು ಮನೋರಮಳನ್ನು ಚುಂಬಿಸಿದ್ದನ್ನು ನೆನಪು ಮಾಡಿಕೊಂಡ ಸಲೀಮ್. ಕ್ಯಾಂಟೀನ್ ಕಿಟಕಿಯೊಳಗಿಂದ ಆ ಪ್ಯಾರಾಪೆಟ್ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಸ್ವಲ್ಪ ನಾಚಿಕೆ, ಹುಸಿಕೋಪ, ಕೆಂಪಾದ ಮುಖ, ಅಂದಿನ ಮನೋರಮಳನ್ನು ನೆನಪಿಗೆ ತಂದುಕೊಂಡ.

"ಏಯ್! ನೀನೇ... ಬಾರೋ ಇಲ್ಲಿ." ಕ್ಯಾಂಟೀನ್ ಗೇಟಿನ ಬಳಿ ನಿಂತಿದ್ದ ಪೊಲೀಸ್‌ಪೇದೆ ಸಲೀಮ್ ಕಡೆ ಬೆರಳು ತೋರಿಸಿ ಕರೆದ. "ಮೈಗಾಡ್!" ಬೆಚ್ಚಿಬಿದ್ದು ಎದ್ದುನಿಂತಳು ಮನೋರಮ. "ನೀನಲ್ಲ! ಅವನೊಬ್ಬನೆ" ಮನೋರಮಳ ಮುಖ ಬಿಳಿಚಿಕೊಂಡಿತು.